# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸಂಖ್ಯೆ: ಕಗಪ್ರಅಪ್ರಾ/70/2018–19 ದಿನಾಂಕ : 07–12–2018

## ಪ್ರಕಟಣೆ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2018–19ನೇ ಸಾಲಿಗೆ ಧನಸಹಾಯಕ್ಕಾಗಿ ವಿವಿಧ ಯೋಜನೆಗಳಿಗೆ/ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಕರ್ನಾಟಕ ರಾಜ್ಯದ 52 ಗಡಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಮತ್ತು ಹೊರರಾಜ್ಯದ ಕನ್ನಡ ಪ್ರದೇಶಗಳಲ್ಲಿ ಬರುವ ಪ್ರದೇಶಗಳಲ್ಲಿನ ಅರ್ಹ ಸಂಘ/ಸಂಸ್ಥೆಗಳು/ಸರ್ಕಾರಿ ಶಾಲಾ / ಕಾಲೇಜುಗಳು/ಹಾಸ್ಟೆಲ್‌ಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.** ಗಡಿ ತಾಲ್ಲೂಕುಗಳ ವ್ಯಾಪ್ತಿಗೆ ಒಳಪಡದ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ/ಮಾನ್ಯ ಮಾಡುವುದಿಲ್ಲ.

ಗಡಿ ತಾಲ್ಲೂಕುಗಳ ನೋಂದಾಯಿತ ಅರ್ಹ ಸಂಘ/ಸಂಸ್ಥೆಗಳಿಗೆ/ ಗ್ರಾಮಗಳಲ್ಲಿ / ತಾಲ್ಲೂಕು ಕೇಂದ್ರಗಳಲ್ಲಿ ಸಾಂಸ್ಕೃತಿಕ ಭವನ/ ಗ್ರಂಥಾಲಯ / ಕ್ರೀಡಾ ಕಟ್ಟಡ / ಬಯಲುರಂಗಮಂದಿರದ ನಿರ್ಮಾಣ / ಸಮುದಾಯ ಭವನ ಇತ್ಯಾದಿ ಹಾಗೂ ಗಡಿ ಭಾಗದ ಸರ್ಕಾರಿ ಶಾಲಾ / ಕಾಲೇಜು/ಹಾಸ್ಟೆಲ್‌ಗಳಲ್ಲಿ ಸಾಂಸ್ಕೃತಿಕ ಭವನ/ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ ಮತ್ತು ರಿಪೇರಿ /ಪ್ರೋಜೆಕ್ಟರ್ ಖರೀದಿ / ಗ್ರಂಥಾಲಯ ನಿರ್ಮಾಣ / ಬಯಲುರಂಗಮಂದಿರ/ ಕ್ರೀಡಾ ಕೊಠಡಿ / ಆವರಣ ಗೋಡೆ (Compound) / ಶೌಚಾಲಯ / ಆಟದ ಮೈದಾನ ನಿರ್ಮಾಣ / ಪಾರ್ಕ್‌ಗಳ ನಿರ್ಮಾಣ / ಕುಡಿಯುವ ನೀರಿನ ಸೌಲಭ್ಯ & ಶುದ್ಧ ಕುಡಿಯುವ ನೀರಿನ ಘಟಕ (ವಾಟರ್ ಫಿಲ್ಟರ್) ಒದಗಿಸುವುದು / ಸೋಲಾರ್ ವಿದ್ಯುತ್ ದೀಪ ಅಥವಾ ಸೋಲರ್ ಯು.ಪಿ.ಎಸ್ ಖರೀದಿ / ಗಣಕಯಂತ್ರ ಖರೀದಿ/ಗಣಕಯಂತ್ರ ಕೊಠಡಿ ನಿರ್ಮಾಣ / ಪೀಠೋಪಕರಣ & ಪಾಠೋಪಕರಣ ಒದಗಿಸುವುದು, ಶಾಲೆಗಳಿಗೆ ಸಂಪರ್ಕ ರಸ್ತೆ ನಿರ್ಮಾಣ, ಗಡಿ ತಾಲ್ಲೂಕುಗಳ ಆಯ್ದ ರಸ್ತೆಗಳ ಸುಧಾರಣೆ / ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ / ಸೋಲಾರ್ ದೀಪ / ಚರಂಡಿ ನಿರ್ಮಾಣ / ಕಮಾನುಗಳನ್ನು ನಿರ್ಮಿಸುವುದು ಹಾಗೂ ನಾಮಫಲಕ ಅಳವಡಿಸುವುದು ಹಾಗೂ ವಿವಿಧ ನೋಂದಾಯಿತ ಸಂಘ ಸಂಸ್ಥೆಗಳಿಗೆ ಗಡಿ ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ / ವಿಚಾರ ಸಂಕಿರಣ / ಆರೋಗ್ಯ ಶಿಬಿರ / ಚಿಂತನಾ ಶಿಬಿರ / ಸಂಗೀತ ಕಾರ್ಯಕ್ರಮ / ಗಡಿ ಉತ್ಸವ ಹಾಗೂ ಹೊರನಾಡು ಗಡಿ ಉತ್ಸವ / ಗಡಿ ಮಹಿಳಾ ಉತ್ಸವ ಆಯೋಜನೆ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಧನಸಹಾಯ ನೀಡಲಾಗುವುದು.

ಅರ್ಜಿ ಸಲ್ಲಿಸುವ ಅರ್ಹ ಸಂಘ/ಸಂಸ್ಥೆ/ಸರ್ಕಾರಿ ಶಾಲಾ ಕಾಲೇಜುಗಳು, ಪ್ರಾಧಿಕಾರದ ವೆಬ್‌ಸೈಟ್ **www.karnataka.gov.in/kbada** ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಅನ್ವಯ ನಿಗದಿತ ನಮೂನೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸುವುದು.

**ಕಾರ್ಯದರ್ಶಿಗಳು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ರೂಂ. ನಂ.107, ಕ್ಯಾಂಟಿನ್ ಹಿಂಭಾಗ, ಬಹುಮಹಡಿ ಕಟ್ಟಡ, ಬೆಂಗಳೂರು–1. ದೂರವಾಣಿ ಸಂಖ್ಯೆ: 22032616 / 22352044.**

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿವಸದ ಒಳಗಾಗಿ.**

ಅವಶ್ಯವಿರುವ ಎಲ್ಲಾ ಮೂಲ ದಾಖಲೆಗಳಿಲ್ಲದ ಯಾವುದೇ ಅರ್ಜಿಯನ್ನು ಯಾವುದೇ ಪತ್ರ ವ್ಯವಹಾರ ಮಾಡದೇ ತಿರಸ್ಕರಿಸಲಾಗುವುದು. ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಧನಸಹಾಯ ನೀಡಲೇಬೇಕೆಂಬುದು ಕಡ್ಡಾಯವಲ್ಲ. ಅರ್ಹ ಸಂಘ/ಸಂಸ್ಥೆ / ಸರ್ಕಾರಿ ಶಾಲಾ / ಕಾಲೇಜು/ಹಾಸ್ಟೆಲ್‌ಗಳಿಗೆ ಯಾವುದಾದರೂ ಒಂದು ಉದ್ದೇಶಕ್ಕೆ ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ. ಪ್ರಾಧಿಕಾರದಲ್ಲಿ ಲಭ್ಯವಿರುವ ಅನುದಾನದ ಮೇಲೆ ಹಾಗೂ ಸ್ಥಳೀಯ ಅಗತ್ಯತೆ ಮೇಲೆ ನಿಯಮಾನುಸಾರ ಅರ್ಹ ಅರ್ಜಿಗಳನ್ನು ಆಯ್ಕೆ ಮಾಡಲಾಗುವುದು. ಅರ್ಹವಲ್ಲದ ಅರ್ಜಿಗಳಿಗೆ ಯಾವುದೇ ರೀತಿಯ ಹಿಂಬರಹ ನೀಡುವುದಿಲ್ಲ.

ಸಹಿ/–

**ಕಾರ್ಯದರ್ಶಿ**

**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**

ವಾಸಾಇ/ಬೆಂ.ನ/**R.O.No.1608/2018-19**